( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ17/04/2023**
**ಅಸಲು ದಾವೆ.ನಂ. 221/2022**
**ಪಿ.ಡಬ್ಲ್ಯೂ1**

( ಮುಖ್ಯ ವಿಚಾರಣೆಃ ಶ್ರೀ.ಕೆ.ಆರ್.ವಿ. ವಕೀಲರಿಂದ ವಾದಿಯ ಪರವಾಗಿ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ. ನಾನು ಈ ಕೆಳಗೆ ಹೇಳಿದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಪ್ರಸ್ತುತ ದಾವೆಯಲ್ಲಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಸದರಿ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ದಾವಾ ಅನುಸೂಚಿ ಐಟಂ ನಂಃ 1ರ ಸ್ವತ್ತಿಗೆ ಸಂಬಂಧಪಟ್ಟ 2021-22 ನೇ ಸಾಲಿನ ಪಹಣಿ ಪತ್ರಿಕೆಯನ್ನು (2 ಪುಟಗಳ ಪೈಕಿ ಒಂದು ಪುಟ) ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ದಾವಾ ಅನುಸೂಚಿ ಐಟಂ ನಂಃ 2 ಮತ್ತು 3 ನೇ ಸ್ವತ್ತುಗಳಿಗೆ ಸಂಬಂಧಪಟ್ಟ 2 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ2 ಮತ್ತು 3 ಎಂದು ಗುರುತಿಸಲಾಯಿತು.

ಎಂ.ಆರ್ ನಂಃ 4/2009-10 ರ ಹಕ್ಕು ಬದಲಾವಣೆ ವಹಿಯನ್ನು ಹಾಜರು ಪಡಿಸಿದ್ದು, ಅದನ್ನು ನಿ ಪಿ-4 ಎಂದು ಗುರುತಿಸಲಾಯಿತು.

( ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**